ದಿನಾಂಕಃ 17-05-2023 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಆರೋಪಿ ಪರಃ ಶ್ರೀ ಎಂ.ವಿ.ಜೆ ವಕೀಲರ ಪರವಾಗಿ ಶ್ರೀ ಕೆ.ಆರ್.ಹೆಚ್ ವಕೀಲರಿಂದ :**

ಆರೋಪಿಯು ನಮ್ಮ ಊರಿನವರೇ ಆದ ಕಾರಣ ಅವರು ನನಗೆ ಪರಿಚಯ ಇರುತ್ತಾರೆ. ನಾನು ಹೇಳಿದ ಹಣವನ್ನು ಆರೋಪಿಗೆ ನಗದು ರೂಪದಲ್ಲಿ ನೀಡಿದ್ದು ನನ್ನ ವಳಿ ನಗದು ಇದ್ದ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ಆರೋಪಿಯು ನೀಡಿದ್ದಾನೆ ಎಂದು ಹೇಳಲಾದ ಚೆಕ್ ಸಂಖ್ಯೆ 630466 ಆಗಿದ್ದು ಅದನ್ನು ದಿ.05.05.2022 ಎಂದು ನಮೂದು ಮಾಡಿ ನನಗೆ ಕೊಟ್ಟಿದ್ದರು. ಸದರಿ ಚೆಕ್ ಅನ್ನು ನಾನು ಅದೇ ದಿನ ನಗಧೀಕರಣಕ್ಕಾಗಿ ಕರ್ನಾಟಕ ಬ್ಯಾಂಕ್ ಬಣಕಲ್ ಶಾಖೆಗೆ ಸಲ್ಲಿಸಿರುತ್ತೇನೆ.

2. ಆರೋಪಿಯು ನನಗೆ ಅವರ ಸ್ನೇಹಿತರ ಮೂಲಕ ಪರಿಚಯ ಆದರು ಎಂದರೆ ಸರಿಯಲ್ಲ. ಆರೋಪಿಯು ನನ್ನಿಂದ ರೂ. 1,50,000/- ಗಳನ್ನು ಪಡೆದುಕೊಂಡಿದ್ದರೂ ಸಹ ಚೆಕ್ ಅನ್ನು ರೂ. 3,45,000/- ಗಳಿಗೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿನ ವಿಚಾರಗಳು ಸತ್ಯಕ್ಕೆ ದೂರವಾದ್ದದ್ದು ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಪಾಟೀ ಸವಾಲನ್ನು ಮುಂದೂಡಲಾಯಿತು.**

( ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು.)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿನಾಂಕಃ 04-04-2019 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎಂ.ವಿ.ಜೆ ವಕೀಲರಿಂದ**

ಮರು ವಿಚಾರಣೆಃ ಇಲ್ಲ

**(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು.)**

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ದಿನಾಂಕಃ 22-12-2018 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ನನ್ನ ಪ್ರಮಾಣೀಕೃತ ಹೇಳಿಕೆಯ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ನನಗೆ ತಿಳಿದಿವೆ ಮತ್ತು ಸತ್ಯವಾಗಿದ್ದು ನಾನು ಹಾಜರುಪಡಿಸಿರುವ ದಾಖಲೆಗಳನ್ನು ನೋಡಿ ಗುರ್ತಿಸಿರುತ್ತೇನೆ.

1. ಆರೋಪಿ ನೀಡಿದ ಚೆಕ್ಕನ್ನು ನಿಪಿ-1 ಎಂದು, ಆರೋಪಿಯ ಸಹಿಯನ್ನು ನಿಪಿ-1(ಎ)
2. ಬ್ಯಾಂಕಿನಿಂದ ನೀಡಿದ ಹಿಂಬರಹವನ್ನು ನಿಪಿ-2,
3. ವಕೀಲರ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ-3,
4. ಅಂಚೆ ರಶೀದಿ ನಿಪಿ-4,
5. ಜಾರಿಯಾಗದ ಅಂಚೆ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ಒಡೆದು ತೆರೆಯಲಾಯಿತು. ಸದರಿ ಅಂಚೆ ಲಕೋಟೆಯನ್ನು ನಿಪಿ-5, ಅದರಲ್ಲಿರುವ ನೋಟಿಸನ್ನು ನಿಪಿ-6 ಎಂದು ಗುರುತಿಸಲಾಯಿತು.

**(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು.)**

**ಓ ಹೇ ಕೇ ಸ ಇ ಎ ಒ.,**

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.